LN-16394 16/11/13

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560 009.

ಸಂಖ್ಯೆ: ಕವಿಪ್ರನಿನಿ/ಬಿ61/18917[2]/2010-11

ದಿನಾಂಕ : 06 NOV 2013

ಎಲ್ಲಾ ಪ್ರಧಾನ ವ್ಯವಸ್ಥಾಪಕರು,
ಎಲ್ಲಾ ಅಧೀಕ್ಷಕ ಇಂಜಿನಿಯರ್‌ಗಳು,
ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು,
ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು.

ಮಾನ್ಯರೆ,

ವಿಷಯ: ಅರ್ಹತಾ ಪರೀಕ್ಷಣಾವಧಿಯ ವಿಸ್ತರಣೆ/ಅರ್ಹತಾ ಪರೀಕ್ಷಣಾರ್ಥಿಯ ವಜಾ ಬಗ್ಗೆ.
ಉಲ್ಲೇಖ: ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/5816/82-83 ದಿನಾಂಕ 07.03.2003.

******

ಕವಿಮಂ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜೇಷ್ಠತಾ) ನಿಯಮಗಳ ಪ್ರಕಾರ ಯಾವುದೇ ಹುದ್ದೆಗೆ ಅರ್ಹತಾ ಪರೀಕ್ಷಣಾ ಅವಧಿ ಮೇರೆಗೆ ನೇಮಕಾತಿ ಹೊಂದಿದ ನೌಕರರು ನಿಯಮಗಳಲ್ಲಿ ಅಥವಾ ನೇಮಕಾತಿ ಆದೇಶದಲ್ಲಿ ವಿಧಿಸಿದ ನಿರ್ಧಿಷ್ಟ ಷರತ್ತುಗಳು ಉದಾ: ನಿಯಮಿಸಿರುವ ವಿಶೇಷ ಅರ್ಹತೆಗಳನ್ನು ಅಥವಾ ನಿಗಧಿ ಪಡಿಸಿರುವ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗಿರುವುದು ಕಡ್ಡಾಯವಾಗಿರುತ್ತದೆ. ಈ ಷರತ್ತುಗಳನ್ನು ಪೂರೈಸಲು ವಿಫಲತೆ ಹೊಂದಿದಲ್ಲಿ ಅಂತಹ ಅರ್ಹತಾ ಪರೀಕ್ಷಣಾರ್ಥಿಗಳನ್ನು ವಜಾಗೊಳಿಸಲು ಸ್ವತ: ನೇಮಕಾತಿ ಪ್ರಾಧಿಕಾರವು ಸೂಕ್ತ ಕ್ರಮ ಕೈಗೊಳ್ಳಲು ಅವಕಾಶವಿರುತ್ತದೆ. ಈ ಸಂಬಂಧ ನಿಗಮವು ದಿನಾಂಕ 07.03.2003ರಲ್ಲಿ ಅಧಿಸೂಚನೆಯನ್ನು ಹೊರಡಿಸಿರುತ್ತದೆ.

ನೇಮಕಾತಿ ಪ್ರಾಧಿಕಾರವು ಅರ್ಹತಾ ಪರೀಕ್ಷಣೆಯ ಅವಧಿಯನ್ನು ಮುಂದುವರಿದ ಸಮಾನ ಅವಧಿಗೆ ವಿಸ್ತರಿಸಬಹುದಾಗಿರುತ್ತದೆ. ಅರ್ಹತಾ ಪರೀಕ್ಷಣೆ ಅವಧಿಯು ಒಂದು ವರ್ಷವಿರುವ ಸಂದರ್ಭದಲ್ಲಿ ವಿಸ್ತರಿಸಿದ ಅವಧಿಯು ಸೇರಿದಂತೆ ಗರಿಷ್ಟ ಎರಡು ವರ್ಷಗಳಿಗಿಂತ ಹೆಚ್ಚಾಗಿ ಇರಕೂಡದು.

ಕವಿಪ್ರನಿನಿ ನಿಗಮ ಕಚೇರಿಗೆ ಅರ್ಹತಾ ಪರೀಕ್ಷಣೆಯ ವಿಸ್ತರಣೆ ಸಂಬಂಧ ಹಲವಾರು ಪ್ರಸ್ತಾವನೆಗಳನ್ನು ಸಲ್ಲಿಸುತ್ತಿರುವುದು ಕಂಡು ಬಂದಿದ್ದು, ಇನ್ನು ಮುಂದೆ ಈ ಸಂಬಂಧ ಪ್ರಸ್ತಾವನೆಗಳನ್ನು ಈ ಕಚೇರಿಗೆ ಕಳುಹಿಸದೆ ಮೇಲೆ ತಿಳಿಸಿರುವಂತೆ ಹಾಗೂ ಉಲ್ಲೇಖದ ಪತ್ರದನ್ವಯ ಗ್ರೂಪ್ ಸಿ ಮತ್ತು ಡಿ ನೌಕರರ ಪರೀಕ್ಷಾರ್ಥ ಅವಧಿಯ ವಿಸ್ತರಣೆ/ಘೋಷಣೆ/ವಜಾ ಸಂಬಂಧ ಎಲ್ಲಾ ಕ್ರಮವನ್ನು ನೇಮಕಾತಿ ಪ್ರಾಧಿಕಾರಿಯು ತಮ್ಮ ಹಂತದಲ್ಲಿಯೇ ಸೂಕ್ತ ನಿರ್ಣಯ ತೆಗೆದುಕೊಳ್ಳುವಂತೆ ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು
[ಆ ಮತ್ತು ಮಾ.ಸಂ]

ಪ್ರತಿ:
ಎಲ್ಲಾ ಲೆಕ್ಕಾಧಿಕಾರಿಗಳು [ಆಂತರಿಕ ತನಿಖೆ], ಕವಿಪ್ರನಿನಿ/ವಿಸಕಂ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

18.11.13
Discuss
Discussed
upload in website
19/11/13
ple
25/11/2013